ಮೌನವಾಗಿ ಇದ್ದಿದ್ದರೆ ಅದರ ಜೀವ ಉಳಿಯುತ್ತಿತ್ತು. ಆದುದರಿಂದಲೇ ಮಾತು ಮತ್ತು ಮೌನಗಳ ಮೀಮಾಂಸೆ ನಮ್ಮ ಸಾರ್ಥಕ ಬದುಕಿಗೆ ಅತ್ಯಂತ ಮುಖ್ಯವಾದದು. ಈ ಕಥೆಯಲ್ಲಿ ಅಂಥ ವಿವೇಕದ್ವನಿಯಿದೆ.

ಮಾತಿನ ಬಗ್ಗೆ ನಮ್ಮ ಸಂಸ್ಕೃತಿಯಲ್ಲಿ ಆಳವಾಗಿಯೂ ಸೂಕ್ಷ್ಮವಾಗಿಯೂ ಯೋಚಿಸಲಾಗಿದೆ. ವೇದದಲ್ಲಿ ಮಾತಿನ ಮಹತ್ವದ ಬಗ್ಗೆ ಸಾಕಷ್ಟು ಸಂಗತಿಗಳು ನಿರೂಪಿತವಾಗಿವೆ. ಒಳ್ಳೆಯ ಮಾತುಗಳನ್ನು ಕೇಳೋಣ, ಒಳ್ಳೆಯ ಮಾತುಗಳನ್ನು ಆಡೋಣ – ಎಂಬ ಹಾರೈಕೆ ವೇದಗಳದ್ದು. ಒಳ್ಳೆಯ ಮಾತು – ಎಂದರೆ ಬದುಕನ್ನು ಸಾರ್ಥಕಗೊಳಿಸುವ ಸಾಧನ.

ಇಡಿಯ ರಾಮಾಯಣ–ಮಹಾಭಾರತಗಳ ಉದ್ದಕ್ಕೂ ಮಾತಿನ ಶಕ್ತಿ ಅನಾವರಣಗೊಂಡಿದೆ. ರಾಮಾಯಣದ ಸೃಷ್ಟಿಗೂ ಮಾತಿನ ಶಕ್ತಿಗೂ ನೇರ ನಂಟಿದೆ. ಕರುಣೆ ಎನ್ನುವುದು ಮಾತಿನ ರೂಪದಲ್ಲಿ ಪ್ರವಹಿಸಿದಾಗಲೇ ಆದಿಕಾವ್ಯವಾಗಿ ರಾಮಾಯಣ ಹುಟ್ಟಿಕೊಂಡದ್ದು. ಅಲ್ಲಿಯ ಕಥೆಯ ಉದ್ದಕ್ಕೂ ಮಾತು ನಿರ್ವಹಿಸಿದ ಪಾತ್ರ ಬಹಳ ಮಾರ್ಮಿಕವಾದುದು. ಮಾತಿನ ಶಕ್ತಿ–ಮಿತಿ–ಆವಶ್ಯಕತೆಗಳ ಬಗ್ಗೆ ರಾಮಾಯಣದಲ್ಲಿ ಬರುವ ಮಾತು: ಸುಲಭಾಃ ಪುರುಷಾ ರಾಜನ್ ಸತತಂ ಪ್ರಿಯವಾದಿನಃ | ಅಪ್ರಿಯಸ್ಯ ಚ ಸತ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ || 'ಪ್ರಿಯವಾದ ಮಾತುಗಳನ್ನಾಡತಕ್ಕವರು ಯಾವಾಗಲೂ ಸಿಗುತ್ತಾರೆ; ಆದರೆ ಅಪ್ರಿಯವಾದರೂ ಹಿತವಾದ ಮಾತನ್ನು ಹೇಳತಕ್ಕವರು ಸಿಗುವುದು ಕಷ್ಟ.' ಆಮೆಗೆ ಹಂಸಗಳು ಹೇಳಿದ ಮಾತುಗಳು ಅದರ ಪಾಲಿಗೆ ಅಪ್ರಿಯವಾಗಿಯೇ ಕಂಡಿವೆ. 'ಮೇಲೆ ಹಾರಾಟದಲ್ಲಿರುವಾಗ ಮಾತನಾಡಬೇಡ; ಪ್ರಾಣಕ್ಕೆ ಅಪಾಯ' ಎಂಬ ಮಾತು ಆಮೆಯ ಪಾಲಿಗೆ ಪ್ರಿಯವಾದುದೇನಾಗಿರಲಿಲ್ಲ. ಏಕೆಂದರೆ ಸದಾ ಮಾತನಾಡುತ್ತಲೇ ಇರುವುದೇ ಅದರ ಸ್ವಭಾವ; ಮಾತು ಆ ಸಂದರ್ಭಕ್ಕೆ ಬೇಕೋ ಬೇಡವೋ – ಎಂಬುದು ಅದಕ್ಕೆ ಮುಖ್ಯವಲ್ಲ. ಮಾತನಾಡಬೇಕು; ಬೇರೆಯವರಿಗೆ ಮಾತಿಗೆ ಉತ್ತರ ಕೊಡಬೇಕು, ಜಗಳ ಆಡಬೇಕು – ಇದು ಅದರ ಸಿದ್ಧಾಂತ. ಮಾತಿನ ಚಟದ ಕಾರಣದಿಂದಾಗಿ ಅದು ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು.

ಯಾವುದೇ ಕೆಲಸದಲ್ಲೂ ಔಚಿತ್ಯ ಎನ್ನುವುದು ತುಂಬ ಮುಖ್ಯವಾಗಿರುತ್ತದೆ. ಅದು ಇಲ್ಲದಿದ್ದಾಗ ಆ ಕೆಲಸ ತನ್ನ ಉದ್ದೇಶವನ್ನೇ ಕಳೆದುಕೊಳ್ಳುತ್ತದೆ. ಔಚಿತ್ಯ ಎಂದರೇನು – ಎಂದು ಹೇಳುವುದು ಕಷ್ಟ. ಇದು ಆಯಾ ಸಂದರ್ಭದ ಯುಕ್ತಾಯುಕ್ತತೆಗಳನ್ನು ಅನುಸರಿಸಿಯೇ ವ್ಯಕ್ತವಾಗುವಂಥದ್ದು. ಆಮೆಯ ಕಥೆಯಲ್ಲಿ ಮಾತನಾಡದೇ ಇರುವುದೇ ಆ ಸಂದರ್ಭಕ್ಕೆ ಒದಗುವಂಥ ಕ್ರಿಯೆಯಾಗಿತ್ತು. ಮೌನವೇ ಆ ಸಮಯದ ಔಚಿತ್ಯವಾಗಿತ್ತು. ಆದರೆ ಅದು ಅದನ್ನು ಮೀರಿ ನಡೆದು ತನ್ನ ಪ್ರಾಣಕ್ಕೇ ಅಪಾಯ ತಂದುಕೊಂಡಿತು.

ಯಾವ ಚಟವನ್ನಾದರೂ ನಿಯಂತ್ರಿಸಿಕೊಳ್ಳಬಹುದೇನೋ; ಆದರೆ ಮಾತಿನ ಚಟವನ್ನು ಮಾತ್ರ ನಿಗ್ರಹಿಸಿಕೊಳ್ಳುವುದು ಸುಲಭವಲ್ಲ. ಒಮ್ಮೆ ಮಾತಿನ ಬಲೆಗೆ ನಮ್ಮ ಮನಸ್ಸು ಸಿಕ್ಕಿಹಾಕಿಕೊಂಡರೆ ಅದರಿಂದ ಬಿಡಿಸಿಕೊಳ್ಳುವುದು ಸುಲಭವಲ್ಲ. ಮಾತಿನ ಆವೇಶದ ದಾಳಿಗೆ ಸಿಕ್ಕಿದವರು ಏನೇನೋ ಮಾತನಾಡುವಂತಾಗುತ್ತದೆ. ಮಾತಾಡುವುದಷ್ಟೇ ಆ ಸಂದರ್ಭದ ಗುರಿಯಾಗಿರುತ್ತದೆಯೇ ಹೊರತು ಏನನ್ನು ಮಾತನಾಡುತ್ತಿದ್ದೇವೆ; ಅಂಥ ಮಾತುಗಳನ್ನು ಆಡುವುದರಿಂದ ಮುಂದೆ ಎಂಥ ಪರಿಸ್ಥಿತಿ ಎದುರಾಗಬಹುದು ಎಂಬ ಯೋಚನೆಯನ್ನೇ